International Journal of Kannada Research
www.kannadajournal.com

ISSN: 2454–5813
IJKR 2018; 4(2): 139-142
© 2018 IJKR
www.kannadajournal.com
Received: 06-02-2018
Accepted: 07-03-2018

**ಜಗನ್ನಾಥ ಬಿ.ಆರ್**
ಸಂಶೋಧನಾ ವಿದ್ಯಾರ್ಥಿ,
ಪ್ರಾಚೀನ ಇತಿಹಾಸ ಮತ್ತು
ಪುರಾತತ್ತ್ವಅಧ್ಯಯನ ವಿಭಾಗ,
ಮಾನಸಗಂಗೋತ್ರಿ, ಮೈಸೂರು

**Correspondence**
**ಜಗನ್ನಾಥ ಬಿ.ಆರ್**
ಸಂಶೋಧನಾ ವಿದ್ಯಾರ್ಥಿ,
ಪ್ರಾಚೀನ ಇತಿಹಾಸ ಮತ್ತು
ಪುರಾತತ್ತ್ವಅಧ್ಯಯನ ವಿಭಾಗ,
ಮಾನಸಗಂಗೋತ್ರಿ, ಮೈಸೂರು

# ಯಗಟಿಪುರದ(ಪುರ) ದೇವಾಲಯಗಳು ಒಂದು ಅವಲೋಕನ

**ಜಗನ್ನಾಥ ಬಿ.ಆರ್**

ಯಗಟಿಪುರವು ಕಡೂರಿನಿಂದ ಸುಮಾರು 18 ಕಿ.ಮೀ. ದೂರದಲ್ಲಿರುವ ಇದು ವಿಜಯನಗರ ಕಾಲಾವಧಿಯಲ್ಲಿ 'ಯಗಟಿ ಚಾವಡಿ' ಎಂಬ ಒಂದು ಆಡಳಿತ ಕೇಂದ್ರವಾಗಿತ್ತು, ಅನಂತರ ಚಿತ್ರದುರ್ಗದ ನಾಯಕರು, ತರೀಕೆರೆಯ ನಾಯಕರು ಮತ್ತು ಟಿಪ್ಪುಸುಲ್ತಾನರ ಆಡಳಿತಕೊಳಪಟ್ಟಿತ್ತು ಇಲ್ಲಿನ ಐತಿಹ್ಯಗಳು ಜನಪದ ಕಥೆಗಳು ಪ್ರಾದೇಶಿಕ ಮಹತ್ವ ಪಡೆದಿವೆ.

ಗ್ರಾಮದ ಮಧ್ಯಭಾಗದಲ್ಲಿ ಯಗಚಿ ಹಳ್ಳದ ದಡದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿತವಾಗಿದೆ. ಇದೊಂದು ದ್ವಿಕೂಟಚಲಾವಾಗಿದ್ದು ವಿಜಯನಗರ ಕಾಲದ ರಚನೆಯಾಗಿದೆ. ಇದು ಗರ್ಭಗೃಹ, ಸುಕನಾಸಿ, ನವರಂಗ, ರಂಗಮಂಟಪ ಮತ್ತು ಮುಖಮಂಟಪಗಳಿದ್ದು ದೇವಾಲಯದ ಸುತ್ತಲೂ ವಿಶಾಲವಾದ ಒಳಮುಖ ಕೈಸಾಲೆಯನ್ನು ಹೊಂದಿದೆ. ಗರ್ಭಗೃಹದಲ್ಲಿ ಮಲ್ಲಿಕಾರ್ಜುನಸ್ವಾಮಿ ಎಂದು ಕರೆಯುವ ಲಿಂಗವಿದೆ. ದಕ್ಷಿಣಭಾಗದಲ್ಲಿರುವ ಗರ್ಭಗೃಹದಲ್ಲಿ ಸು. 4 ಅಡಿ ಎತ್ತರವಿರುವ ವೀರಭದ್ರನ ಶಿಲ್ಪವಿದೆ. ಇದು ವಕ್ಕಲಗೆರೆ ಮತ್ತು ಯಳ್ಳಂಬಳಸೆಯಲ್ಲಿರುವ ವೀರಭದ್ರ ಶಿಲ್ಪದ ಲಕ್ಷಣಗಳನ್ನು ಹೊಂದಿದೆ. ಇದಕ್ಕೆ ಎದುರಾಗಿ ಇತ್ತೀಚೆಗೆ ನಿರ್ಮಾಣವಾಗಿರುವ ಮತ್ತೊಂದು ಗರ್ಭಗೃಹವಿದೆ ಇಲ್ಲಿ 3 ಅಡಿ ಎತ್ತರವಿರುವ ಗಣೇಶನ ಶಿಲ್ಪವಿದೆ. ಇದಕ್ಕೆ ಪ್ರತ್ಯೇಕವಾದ ಒಂದು ಪ್ರವೇಶದ್ವಾರವಿದ್ದು ಈ ಪ್ರವೇಶದ್ವಾರ ಇತ್ತೀಚಿನ ಗಾರೆ ನಿರ್ಮಾಣವಾಗಿದ್ದು ಮೇಲ್ಭಾಗದಲ್ಲಿ ಸುಂದರವಾದ ಗೋಪುರವನ್ನು ಒಳಗೊಂಡಿದೆ. ಎರಡೂ ಗರ್ಭಗೃಹಕ್ಕೆ ಹೊಂದಿಕೊಂಡಂತೆ ತೆರೆದ ಸುಕನಾಸಿಯಿದೆ ಇವು ಗರ್ಭಗೃಹದಷ್ಟೇ ವಿಶಾಲವಾಗಿದೆ. ಮಲ್ಲಿಕಾರ್ಜುನ ಲಿಂಗವಿರುವ ಗರ್ಭಗೃಹಕ್ಕೆ ಮಾತ್ರ ಪ್ರದಕ್ಷಿಣಾಪಥವನ್ನು ನಿರ್ಮಿಸಲಾಗಿದೆ ಇದು ಬಾದಾಮಿ ಚಾಳುಕ್ಯ ದೇವಾಲಯಗಳ ಪ್ರದಕ್ಷಿಣಾಪಥದ ಮಾದರಿಯಂತಿದೆ.

ನವರಂಗದಲ್ಲಿ ನಾಲ್ಕು ವಿಜಯನಗರ ಶೈಲಿಯ ಕಂಬಗಳಿವೆ ನವರಂಗದ ಮಧ್ಯಭಾಗದಲ್ಲಿ ಲಿಂಗಕ್ಕೆ ಎದುರಾಗಿ ನಂದಿ ಶಿಲ್ಪವಿದೆ. ಸುಕನಾಸಿ ಮತ್ತು ನವರಂಗದ ನೆಲಕ್ಕೆ ಆಧುನಿಕ ಟೈಲ್ಸ್‌ಗಳನ್ನು ಹಾಕಲಾಗಿದೆ. ನವರಂಗದಲ್ಲಿ ಅರ್ಧ ಅಡಿಯಷ್ಟು ಎತ್ತರದ ಚೌಕಾಕಾರದ ವೇದಿಕೆಯಿದ್ದು ಇದನ್ನೂ ನವೀಕರಿಸಲಾಗಿದೆ ಭುವನೇಶ್ವರಿಯಲ್ಲಿ ಯಾವುದೇ ಅಲಂಕರಣವಿಲ್ಲ.

ನವರಂಗದ ಅನಂತರ 30 ಅಂಕಣದ ನಾಟ್ಯಮಂಟಪವಿದೆ, ಇದರಲ್ಲಿ ಸಾಲೊಂದರಲ್ಲಿ 7 ಕಂಬಗಳಂತೆ 6 ಸಾಲಿನಲ್ಲಿ ಒಟ್ಟು 42 ಕಂಬಗಳಿವೆ. ಇವುಗಳಲ್ಲಿ 20 ಸ್ವತಂತ್ರ ಕಂಬಗಳು ಸುತ್ತಲೂ ಸು. 10 ಅಡಿ ವಿಶಾಲವಾದ 5 ಅಡಿ ಎತ್ತರದ ಕಕ್ಷಾಸನವನ್ನು ನಿರ್ಮಿಸಲಾಗಿದೆ. ಎಲ್ಲ ಕಂಬಗಳು ಒಂದೇ ಲಕ್ಷಣಗಳನ್ನು ಹೊಂದಿವೆ, ತಳಭಾಗವು ಚೌಕಾಕಾರವಾಗಿದ್ದು ಮೇಲಿನ ಭಾಗ ಪುಷ್ಪಬೋದಿಗೆಯನ್ನು ಹೊಂದಿದೆ. ಮಧ್ಯದ ಅಂಕಣದಲ್ಲಿ ಸು. ಅರ್ಧ ಅಡಿ ಎತ್ತರದ ವೃತ್ತಾಕಾರದ ಜಗತಿ ಇದೆ. ನಾಟ್ಯಮಂಟಪಕ್ಕೆ ಪೂರ್ವ, ಉತ್ತರ, ದಕ್ಷಿಣ ಭಾಗದಲ್ಲಿ ದ್ವಾರಗಳಿವೆ. ಮೂರು ದ್ವಾರಗಳಲ್ಲಿಯೂ ಎರಡೆರಡು ಷೋಡಶಾಕೃತಿಯ ಕಂಬಗಳಿದ್ದು ಮೇಲ್ಭಾಗದಲ್ಲಿ ದುಂಡನೆಯ ಕಲ್ಲಿದೆ ಈ ದ್ವಾರಮಂಟಪದ ಎರಡು ಬದಿಯಲ್ಲೂ ಕಕ್ಷಾಸನವಿದ್ದು ಮೇಲ್ಭಾಗವು ಕಲ್ಲಿನ ಚಪ್ಪಡಿಗಳಿಂದ ಮುಚ್ಚಲ್ಪಟ್ಟಿದ್ದು ಇದಕ್ಕೆ ಇತ್ತೀಚೆಗೆ ಬಣ್ಣ ಹಚ್ಚಲಾಗಿದೆ. ದಕ್ಷಿಣ ದಿಕ್ಕಿನಲ್ಲಿರುವ ಪ್ರವೇಶ ದ್ವಾರದಲ್ಲಿ ಸುಂದರವಾದ ಎರಡು ಶೈವ ದ್ವಾರಪಾಲಕರ ಶಿಲ್ಪಗಳಿವೆ, ಕೈಯಲ್ಲಿ ತ್ರಿಶೂಲವನ್ನು ಹಿಡಿದಿರುವ ಈ ಶಿಲ್ಪಗಳು ವಿಜಯನಗರ ಶೈಲಿಯನ್ನು ಸ್ಪಷ್ಟವಾಗಿ ಹೋಲುತ್ತವೆ. ದೇವಾಲಯದ ಗರ್ಭಗೃಹ, ಗಣಪತಿ ಗುಡಿ ಮತ್ತು ನಾಟ್ಯಮಂಟಪದ ಮೇಲೆ ದ್ರಾವಿಡ ಮಾದರಿಯ ಗೋಪುರಗಳಿದ್ದು ಇವು ಜೀರ್ಣೋದ್ಧಾರಗೊಂಡಿವೆ.

ದೇವಾಲಯವು ಸುತ್ತಲೂ ವಿಶಾಲವಾದ ಒಳ ಕೈಸಾಲೆಯನ್ನು ಹೊಂದಿದ್ದು ಉತ್ತರ ಭಾಗದಲ್ಲಿ ರಾಜಗೋಪುರವಿದೆ ಇದು ಮೂರು ಹಂತಸ್ತನ್ನು ಹೊಂದಿದೆ ಮೇಲ್ಭಾಗದಲ್ಲಿ ಐದು ಕಳಸಗಳಿವೆ.

ಪೂರ್ವಭಾಗದಲ್ಲಿರುವ ದ್ವಾರವು ನಾಲ್ಕು ಕಂಬಗಳ ಒಳ ಕೈಸಾಲೆಯನ್ನು ಹೊಂದಿದೆ ಅನಂತರದಲ್ಲಿ ಎರಡು ಅಲಂಕಾರಿಕ ಕಂಬಗಳನ್ನೊಳಗೊಂಡ ಜಗತಿ ಇದೆ. ಪ್ರತಿಯೊಂದು ಕಂಬಗಳ ಮುಖಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ ಇಲ್ಲಿ ಗಣಪತಿ, ಭೈರವ, ನಾಗಬಂಧ, ನಾಟ್ಯಶಿವ, ಕುಮಾರ, ವ್ಯಾಳ, ಕುಬ್ಜ, ಪದ್ಮ, ಯೋಗನರಸಿಂಹ, ಕಾಳಿಯಮರ್ಧನ, ಸಿಂಹದ ದೇಹವಿರುವ ಸ್ತ್ರೀಮುಖ ಶಿಲ್ಪ, ಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಭಕ್ತರು, ಆಂಜನೇಯ, ವ್ಯಾಳ, ತಪಸನ್ನು ಆಚರಿಸುವ ಋಷಿ, ಕುಳಿತಿರುವ ಸಿಂಹ, ಬಾಲಕೃಷ್ಣ, ಆನೆಯು ಲಿಂಗಕ್ಕೆ ನೀರಿನ ನೈವೇದ್ಯ ಮಾಡುತ್ತಿರುವ ಶಿಲ್ಪಗಳಿವೆ. ಈ ದ್ವಾರವೆ ಪೂರ್ವದಲ್ಲಿ ಮುಖ್ಯದ್ವಾರವಾಗಿರುವುದಕ್ಕೆ ಇದರ ಎರಡು ಬದಿಯಲ್ಲಿರುವ ಶೈವ ದ್ವಾರಪಾಲಕರ ಅದ್ಭುತ ಶಿಲ್ಪಗಳೆ ಸಾಕ್ಷಿ. ದ್ವಾರದ ಹಿಂಭಾಗದ ಮೇಲ್ಭಾಗದ ತೊಲೆಯಲ್ಲಿ ಬಾಗಿಲುಗಳ ಗುಬುಟನ್ನು ಹಾಕಲು ಅರ್ಧ ಅಡಿ ಅಗಲ ಒಂದು ಅಡಿ ಆಳವಿರುವ ರಂಧ್ರಗಳಿವೆ. ಒಳಜಗಲಿಯ ಕಂಬಗಳಲ್ಲಿ ನಂದಿ, ನಾಗ, ಲಿಂಗಗಳು, ಮಹಿಷಮರ್ಧಿನಿ, ನೃತ್ಯಕುಬ್ಜ, ಹಂಸ, ಪದ್ಮ ಮುಂತಾದ ಶಿಲ್ಪಗಳಿವೆ. ದಕ್ಷಿಣ ಕೈಸಾಲೆಯಲ್ಲಿ 28 ಕಂಬಗಳು, ಪೂರ್ವಭಾಗದ ಕೈಶಾಲೆಯಲ್ಲಿ 19 ಕಂಬಗಳು, ಉತ್ತರ ಭಾಗದ ಕೈಸಾಲೆಯಲ್ಲಿ 28 ಕಂಬಗಳಿದ್ದು, ಉತ್ತರ ದಿಕ್ಕಿನಲ್ಲಿ ನಾಲ್ಕು ಕಂಬದ ಮಂಟಪವಿದೆ. ದೇವಾಲಯದ ನೈರುತ್ಯ ಭಾಗದಲ್ಲಿ ಕೈಸಾಲೆಗೆ ಹೊಂದಿಕೊಂಡಂತೆ ಪಾರ್ವತಿ ಗುಡಿಯಿದೆ ಇದರ ಪಕ್ಕದಲ್ಲಿ ದುರ್ಗಿಯ ಗುಡಿಯಿದ್ದು ಈ ಗುಡಿಯ ಮೇಲ್ಭಾಗದಲ್ಲಿ ಸಣ್ಣ ಶಿಖರವಿದೆ. ಇದು ಗರ್ಭಗೃಹ ಮತ್ತು ನವರಂಗವನ್ನು ಹೊಂದಿದ್ದು ನವರಂಗದಲ್ಲಿ 12 ಸ್ವತಂತ್ರ ಕಂಬಗಳನ್ನು ಕಾಣಬಹುದು. ದೇವಾಲಯದ ವಾಯವ್ಯ ಭಾಗದಲ್ಲಿ ಉತ್ಸವ ಮೂರ್ತಿಗಳನ್ನು ಇಡುವ 8 ಸ್ವತಂತ್ರ ಕಂಬಗಳ ಮಂಟಪವಿದ್ದು ಇದರ ಮೇಲ್ಭಾಗದಲ್ಲೂ ಸಣ್ಣ ಶಿಖರವಿದೆ. ದೇವಾಲಯದ ಮುಂಭಾಗದಲ್ಲಿ ಸು. 40 ಅಡಿ ಎತ್ತರದ ನಂದಿ ಕಂಬವಿದೆ ಕಂಬದ ಮೇಲೆ ಸಣ್ಣಮಂಟಪವಿದೆ. ಉತ್ತರ ಭಾಗದಲ್ಲಿ ಇತ್ತೀಚೆಗೆ ನಿರ್ಮಿಸಿರುವ ಐದು ಹಂತದ ರಾಜಗೋಪುರವಿದ್ದು ಇದರ ಮೇಲ್ಭಾಗದಲ್ಲಿ ಐದು ಕಳಸಗಳಿವೆ.

ಗ್ರಾನೈಟ್ ಶಿಲೆಯಿಂದ ನಿರ್ಮಿತವಾದ ಈ ದೇವಾಲಯ ಶುದ್ಧ ದ್ರಾವಿಡ ಶೈಲಿಯಲ್ಲಿದ್ದು ಮೂರು ಪ್ರವೇಶ ದ್ವಾರಗಳನ್ನು ಹೊಂದಿದ್ದು ಇವು ಅಲಂಕಾರಿಕ ಕೆತ್ತನೆಯಿಂದ ಕೂಡಿವೆ. ದೇವಾಲಯದ ಪೂರ್ವ ದಿಕ್ಕಿನಲ್ಲಿ ಗವಿಮಲ್ಲಪ್ಪ ಎಂದು ಕರೆಯುವ ಗುಡಿ ಇದೆ. ಈ ಗ್ರಾಮದಲ್ಲಿ ಎರಡು ತುಲಾಭಾರ ಮಂಟಪಗಳಿವೆ ತುಲಾಭಾರ ಮಂಟಪಗಳನ್ನು ಸಾಮಾನ್ಯವಾಗಿ ವಿಜಯನಗರ ಕಾಲದಲ್ಲಿ ಕಾಣಬಹುದು.

ಈ ದೇವಾಲಯದ ಗಣಪತಿ ವಿಗ್ರಹದ ಮುಂದಿನ ಕಲ್ಲಿನ ತೊಲೆಯ ಮೇಲಿರುವ ಕ್ರಿ.ಶ.1526ರ ಶಾಸನದಲ್ಲಿ ಶ್ರೀಮಾನ್ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಕೃಷ್ಣದೇವರಾಯರ ಅಡಪದಬೈಯ್ಯಪ್ಪ ನಾಯಕರ ತಂದೆ ತಿಮ್ಮಣ್ಣ ನಾಯಕನಿಗೆ ಪುಣ್ಯವಾಗಬೇಕೆಂದು ಚೆನ್ನಪ್ಪನು ಆಸಂದಿ ಸೀಮೆಯೊಳಗಣ ಕಾರೆಯಹಳ್ಳಿಗೆ ಪ್ರತಿನಾಮ ಮಾಡಿ ಪುರ ಗ್ರಾಮವನ್ನು ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ್ದಾಗಿ ಹೇಳುತ್ತದೆ. ಇದೇ ದೇವಾಲಯದ ಮತ್ತೊಂದು ಶಾಸನ ಕ್ರಿ.ಶ. 1599ರಲ್ಲಿ ಚಿತ್ರದುರ್ಗದ ತಿಮ್ಮಣ್ಣನಾಯಕನ ತಂಗಿ ಕೆಂಪಮ್ಮ ನಾಯಕಿ ಹರೆಯನತೊಳಲು ಗ್ರಾಮವನ್ನು ದಾನ ನೀಡಿದ ವಿವರವಿದೆ. ಮೇಲೆ ವಿವರಿಸಿರುವ ದೇವಾಲಯದ ವಾಸ್ತುಲಕ್ಷಣ ಮತ್ತು ಶಾಸನಗಳ ವಿವರಣೆಯನ್ನು ಅವಲೋಕಿಸಿದರೆ ಇದು ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯ ಎಂದು ಹೇಳಬಹುದು.

**ಯಗಟಿಪುರದ (ಪುರ) ಕಲ್ಲೇಶ್ವರ ದೇವಾಲಯ:** ಪುರ ಗ್ರಾಮದ ಉತ್ತರ ದಿಕ್ಕಿನಲ್ಲಿ ಸು. ಅರ್ಧ ಕಿ.ಮೀ. ದೂರದ ಜಮೀನಿನಲ್ಲಿದೆ. ಸ್ಥಳೀಯರು ಹೇಳುವಂತೆ ಇದು ಗ್ರಾಮದಲ್ಲಿರುವ ಮಲ್ಲಿಕಾರ್ಜುನ ದೇವಾಲಯಕ್ಕಿಂತ ಪೂರ್ವದ್ದು. ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಸೋಪುಗಲ್ಲಿನಿಂದ ನಿರ್ಮಿಸಲಾಗಿರುವ ಇದು ಎತ್ತರದಲ್ಲಿ ಕುಳ್ಳಾಗಿದ್ದು ಗರ್ಭಗೃಹ, ಸುಕನಾಸಿ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಲಿಂಗವಿದೆ ಇಲ್ಲಿ ತೆರೆದ ನವರಂಗವಿದ್ದು ಗರ್ಭಗೃಹದಷ್ಟೇ ಉದ್ದ, ಅಗಲವನ್ನು ಹೊಂದಿದೆ. ಅನಂತರ ನವರಂಗವಿದ್ದು ಇಲ್ಲಿನ ನೈರುತ್ಯ ಭಾಗದಲ್ಲಿ ಸು. 2 ಅಡಿ ಎತ್ತರದ ಬಲಮುರಿ ಗಣಪತಿ ಇದೆ ಬಲಕ್ಕೆ ಸೊಂಡಿಲು ತಿರಿಗಿರುವ ಈ ರೀತಿಯ ಗಣಪತಿ ಶಿಲ್ಪಗಳು ವಿರಳ. ಎಡಗಡೆ ಒಂದು ದೇವಕೋಷ್ಠವಿದ್ದು ಅದು ಖಾಲಿ ಇದೆ. ವಾಸ್ತುಶೈಲಿ ದೃಷ್ಟಿಯಿಂದ ಇದೊಂದು ಸಾಧಾರಣ ದೇವಾಲಯವಾದರೂ ವಿಜಯನಗರ ಕಾಲಕ್ಕಿಂತಲೂ ಪೂರ್ವದ ನಿರ್ಮಾಣವಾಗಿದ್ದು ಈಗ ಇದರ ಎಲ್ಲಾ ಭಾಗಗಳಿಗೂ ಸುಣ್ಣ ಬಳಿಯಲಾಗಿದೆ.

**ಯಗಟಿಯ ಕಲ್ಲೇಶ್ವರ ದೇವಾಲಯ:** ಯಗಟಿ ಗ್ರಾಮವು ಯಗಟಿಪುರದಿಂದ ಸು, ಅರ್ಧ ಕಿ.ಮೀ. ದೂರದಲ್ಲಿದೆ. ಕಲ್ಲೇಶ್ವರ ದೇವಾಲಯವು ಗ್ರಾಮದ ಈಶಾನ್ಯಭಾಗದ ಕೆರೆ ಏರಿಯ ಪಕ್ಕದಲ್ಲಿದೆ ಈ ದೇವಾಲಯವನ್ನು ಕ್ರಿ.ಶ.1113ರಲ್ಲಿ ಹೊಯ್ಸಳ ರಾಜ ವಿಷ್ಣುವರ್ಧನನು ರಾಜ್ಯಭಾರ ಮಾಡುತ್ತಿದ್ದಾಗ ಗ್ರಾಮದ ಮಹಾಜನಗಳಾದ ಪಚ್ಚಳಿಕೆನಾಯಕ, ಬೀವೆಯನಾಯಕ ಮತ್ತಿತರರು ಈ ದೇವಾಲಯವನ್ನು ಕಟ್ಟಿಸಿ ದೇವರ ನೈವೆಧ್ಯಕ್ಕೆ ಭೂಮಿಯನ್ನು ದಾನ ನೀಡಿದರು. ಉತ್ತರಾಭಿಮುಖವಾಗಿರುವ ದೇವಾಲಯ ಸಂಪೂರ್ಣವಾಗಿ ಭಗ್ನವಾಗಿದೆ ಇದನ್ನು ಇತೀಚಿಗೆ ಆಧುನಿಕ ಸಾಮಾಗ್ರಿಗಳನ್ನು ಬಳಸಿ ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ 1 ಅಡಿ ಎತ್ತರದ ಲಿಂಗವಿದ್ದು ಅದರ ಎಡಭಾಗದಲ್ಲಿ ಚತುರ್ಭುಜವನ್ನು ಹೊಂದಿರುವ 3 ಅಡಿ ಎತ್ತರದ ಪಾರ್ವತಿಯ ಶಿಲ್ಪವಿದೆ. ಬಲಭಾಗದಲ್ಲಿ ಎರಡೂವರೆ ಅಡಿ ಎತ್ತರದ ಗಣಪತಿ ಶಿಲ್ಪವಿದೆ. ಲಿಂಗಕ್ಕೆ ಎದುರಾಗಿ ದೇವಾಲಯದ ಹೊರಗಡೆ ನಂದಿ ಶಿಲ್ಪವಿದೆ. ಇಲ್ಲಿಯ ಶಿಲ್ಪಗಳ ಲಕ್ಷಣಗಳನ್ನು ಗಮನಿಸಿದರೆ ಇವುಗಳು ವಿಜಯನಗರ ಕಾಲದ ಶಿಲ್ಪಗಳನ್ನು ಹೋಲುತ್ತವೆ. ಇಲ್ಲಿರುವ ನಂದಿಯು ಯಗಟಿಪುರದ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ನಂದಿ ಶಿಲ್ಪದ ಲಕ್ಷಣಗಳನ್ನು ಹೊಂದಿದೆ. ದೇವಾಲಯದ ಬಲಭಾಗದಲ್ಲಿ ಸು. 6 ಅಡಿ ಎತ್ತರದ ಮೂರು ಹಂತವುಳ್ಳ ಶಾಸನೋಕ್ತವಾದ (ಅಪ್ರಕಟಿತ) ಸುಂದರ ವೀರಗಲ್ಲಿದೆ.

**ಅರೆಕಲ್ಲಮ್ಮ ದೇವಾಲಯ:** ಯಗಟಿ ಗ್ರಾಮದ ಮಧ್ಯಭಾಗದಲ್ಲಿ ಈ ದೇವಾಲಯವಿದೆ ಇದು ಇಲ್ಲಿನ ಗ್ರಾಮದೇವತೆಯಾಗಿರುವ ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಇದನ್ನು ಇತ್ತೀಚಿಗೆ ಜೀರ್ಣೋದ್ಧಾರವಾಗಿದೆ. ಗರ್ಭಗೃಹ, ನವರಂಗ ಮತ್ತು ತೆರೆದ ಮುಖಮಂಟಪವನ್ನು ಹೊಂದಿರುವ ಇದು ಗರ್ಭಗೃಹದಲ್ಲಿ ಸು. 2 ಅಡಿ ಎತ್ತರದ ಅರೆಕಲ್ಲಮ್ಮ ಎಂದು ಕರೆಯುವ ಮಹಿಷಮರ್ಧಿನಿಯ ವಿಗ್ರಹವಿದ್ದು ಇದು ಕೈಯಲ್ಲಿ ತ್ರಿಶೂಲ, ಢಮರು, ಖಡ್ಗ ಹಾಗೂ ಅಭಯ ಹಸ್ತವನ್ನು ಹೊಂದಿದೆ. ನವರಂಗದಲ್ಲಿ 4 ಕಂಬಗಳಿದ್ದು ಅವುಗಳ ಕೆಳಭಾಗ ಚೌಕಾಕಾರವಾಗಿದ್ದು ಪಟ್ಟಿಕೆಯ ನಾಲ್ಕು ಮೂಲೆಗಳಲ್ಲಿ ಪದ್ಮದ ದಳದ ರೀತಿಯಲ್ಲಿದ್ದು, ಕಂಬಗಳ ಮೇಲ್ಭಾಗದಲ್ಲಿ ಕೆಳಮುಖವಾದ ಗುಬುಟಿದೆ. ಪ್ರತಿಯೊಂದು ಕಂಬದಲ್ಲಿಯೂ ಚೌಕಾಕಾರದ ಎರಡು ಪಟ್ಟಿಕೆಗಳಿವೆ ಇವುಗಳಲ್ಲಿ

ಶಿಲ್ಪಗಳನ್ನು ಕೆತ್ತಲಾಗಿದೆ. ಆನೆಯು ಲಿಂಗಕ್ಕೆ ನೀರಿನ ಅಭಿಷೇಕ ಮಾಡುತ್ತಿರುವುದು, ವ್ಯಾಘ್ರ, ಗಣಪತಿ, ಬಾಲಕೃಷ್ಣ, ಬ್ರಹ್ಮ, ಯೋಗನರಸಿಂಹ, ಕೇಶವ, ವ್ಯಾಳ, ಹುಲಿಯನ್ನು ಕೊಲ್ಲುತ್ತಿರುವ ದೃಶ್ಯ ಮುಂತಾದವುಗಳನ್ನು ಶಿಲ್ಪಿಸಲಾಗಿದೆ. ಭುವನೇಶ್ವರಿಯಲ್ಲಿ ಯಾವುದೇ ಅಲಂಕರಣವಿಲ್ಲ.

ದೇವಾಲಯದ ಮುಂಭಾಗದಲ್ಲಿ ತೆರೆದ ಮುಖಮಂಟಪವಿದ್ದು 4 ಸ್ವತಂತ್ರ ಕಂಬಗಳಿವೆ. ಮುಖಮಂಟಪದಲ್ಲಿ ಹಸ್ತಿ ಹಸ್ತ ಸೋಪಾನವಿದೆ. ದೇವಾಲಯವು ಸಾಧಾರಣವಾದ ಸು. 2 ಅಡಿ ಎತ್ತರದ ಅಧಿಷ್ಠಾನದ ಮೇಲಿದೆ. ಇಲ್ಲಿರುವ ಶಿಲ್ಪ ಹಾಗೂ ಕಂಬಗಳ ಲಕ್ಷಣಗಳನ್ನು ನೋಡಿದರೆ ಇದು ವಿಜಯನಗರ ಕಾಲದ ಲಕ್ಷಣಗಳನ್ನು ಹೊಂದಿದೆ. ಸ್ಥಳೀಯರು ಹೇಳುವಂತೆ ಈ ಕಂಬಗಳನ್ನು ಬನಶಂಕರಮ್ಮ ದೇವಾಲಯದಿಂದ ತಂದು ಕಟ್ಟಲಾಗಿದೆ. ಪ್ರಸ್ತುತ ಗ್ರಾಮದಲ್ಲಿರುವ ಬನಶಂಕರಮ್ಮ ದೇವಾಲಯ ಇತ್ತೀಚೆಗೆ ಜೀರ್ಣೋದ್ಧಾರವಾಗಿದೆ ಇದಲ್ಲದೆ ಹೊಸದಾಗಿ ನಿರ್ಮಾಣಗೊಂಡಂತಹ ವೀರಾಂಜನೇಯ ಮತ್ತು ಈಶ್ವರ ದೇವಾಲಯಗಳಿವೆ. ಈಶ್ವರ ದೇವಾಲಯದಲ್ಲಿ ಲಿಂಗ ಮತ್ತು ನಂದಿಯಿದೆ. ಕ್ರಿ.ಶ. 1569ರಲ್ಲಿ ವಿಜಯನಗರದ ಅರಸ ಸದಾಶಿವ ಮಹಾರಾಯ ಯಗಟಿಯ ಅಲ್ಲಾಳನಾಥ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಬಹುಶಃ ಆ ದೇವಾಲಯವು ಭಗ್ನವಾಗಿದ್ದು ಅನಂತರದಲ್ಲಿ ಇಲ್ಲಿ ಮಹಿಷಮರ್ಧಿನಿಯ ಶಿಲ್ಪವನ್ನು ತಂದು ಪ್ರತಿಷ್ಠಾಪಿಸಿ ಅದನ್ನೇ ಅರೆಕಲ್ಲಮ್ಮ ಎಂದು ಪೂಜಿಸುತ್ತಿದ್ದಾರೆ.

**ಛಾಯಾಚಿತ್ರಗಳು**


**ಅರೆಕಲ್ಲಮ್ಮ ದೇವಾಲಯ**


**ವೀರನಾರಾಯಣ ದೇವಾಲಯದ ನವರಂಗ**


**ಲಕ್ಷ್ಮಿ**


**ವೀರನಾರಾಯಣ**


**ಗಣಪತಿ**


**ಮಲ್ಲಿಕಾರ್ಜುನಸ್ವಾಮಿ ದೇವಾಲಯದ ನವರಂಗ**


**ಮಲ್ಲಿಕಾರ್ಜುನಸ್ವಾಮಿ ಲಿಂಗ**


**ಮಲ್ಲಿಕಾರ್ಜುನಸ್ವಾಮಿ ದೇವಾಲಯ**


**ನಂದಿ**


**ವೀರಗಲು**

**ಪರಾಮರ್ಶನ ಗ್ರಂಥಗಳು**


1. ಹಾ.ಮಾ.ನಾಯಕ–ಕನ್ನಡ ವಿಷಯ ವಿಶ್ವಕೋಶ, ಸಂಪುಟ–01, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2005.
2. ಶ್ರೀಕಂಠಶಾಸ್ತ್ರಿ,ಎಸ್.–ಹೊಯ್ಸಳ ವಾಸ್ತುಶಿಲ್ಪ–ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965.
3. ಎ.ಕ.ಸಂ – 12, ಶಾಸನ ಸಂಖ್ಯೆ – 123, ಪು.131–32
4. ಎ.ಕ.ಸಂ – 12, ಶಾಸನ ಸಂಖ್ಯೆ – 122, ಪು.131
5. ಎ.ಕ.ಸಂ – 12, ಶಾಸನ ಸಂಖ್ಯೆ – 188, ಪು.210
6. ಎ.ಕ.ಸಂ – 12, ಶಾಸನ ಸಂಖ್ಯೆ – 187, ಪು.209
7. William Coelho. The Hoysala Vamsa, Bombay, 1950.
8. Sharma SR, Jainism. Karnataka Culture, Meerut, 1989.
9. Sheik Ali B. The Hoysala Dynasty, Mysore, 1972.
10. Srinivasan KR. Temples of South India, New Delhi, 1985.
11. Ghosh A. The Jaina Art and Architecture, Delhi, 1974.
12. ಕಲಬುರ್ಗಿ, ಎಂ.ಎಂ. – ಕರ್ನಾಟಕದ ಕೈಫಿಯತ್ತುಗಳು, ಪು. 112